ಅಧ್ಯಕ್ಷರು : ಇಲ್ಲಿಯವರೆಗೆ ನನಗೆ ಆ ರೀತಿಯ ಸುದ್ದಿಗಳು ಅಥವಾ ಪತ್ರಗಳು ಬಂದಿಲ್ಲ. ಆದ್ದರಿಂದ ಆ ವಿಚಾರವನ್ನು ಇಲ್ಲಿಗೆ ಬಿಟ್ಟು ಮುಂದಿನ ವಿಷಯವನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಪ್ರಕಟಣೆ

ಅಧ್ಯಕ್ಷರು : ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ದಿನಾಂಕ 23ನೇ ಮಾರ್ಚ್ 2000 ದಂದು ವಿಧಾನಪರಿಷತ್ತಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ 2000ವನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿತೆಂದು ಹಾಗೂ ಈ ವಿಧೇಯಕಕ್ಕೆ ವಿಧಾನಸಭೆಯು ಸಮ್ಮತಿಯನ್ನು ನೀಡಬೇಕೆಂದು ಕೋರಲಾಗಿದೆ.

ಶ್ರೀ ಜಯಪ್ರಕಾಶ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಕೆಲಸಕ್ಕೆ ಸಂಬಂಧಪಟ್ಟ ಹಾಗೆ ಕಳೆದ ಬಜೆಟ್‌ನಲ್ಲಿ ಪಾಸ್ ಆಗಿದ್ದು ಆದರಲ್ಲಿ ಗ್ರಾಂಟ್ಸ್ ಇದೆ. ಆದರೆ ಆ ಕೆಲಸಕ್ಕೆ ಇಷ್ಟರವರೆಗೆ ಅಪ್ರೂವಲ್ ಕೊಟ್ಟಿಲ್ಲ. ಅಪ್ರೂವಲ್ ಕೊಡದಿದ್ದರೆ ಹಣ ಲ್ಯಾಪ್ಸ್ ಆಗುತ್ತದೆ. ಆದಕ್ಕೋಸ್ಕರ, ಮಾನ್ಯ ಸಣ್ಣ ನೀರಾವರಿ ಸಚಿವರು ಇಷ್ಟರೊಳಗೆ ಆ ಕೆಲಸ ಮಾಡಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟರೆ ಒಳ್ಳೆಯದು. ನಾನು ನೋಟೀಸ್ ಕೊಟ್ಟು 2 ದಿವಸಗಳಾಗಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯಸಚಿವರು) : ಮಾನ್ಯ ಅಧ್ಯಕ್ಷರೆ, 27ನೇ ತಾರೀಖು ಟಿ.ಎ.ಸಿ. ಮೀಟಿಂಗ್ ಇದೆ. ಟಿ.ಎ.ಸಿ.ಯಲ್ಲಿ ಕ್ಲಿಯರ್ ಆಗಬೇಕು. ಅಲ್ಲಿ ಸಬ್‌ಸಿಕ್ವೆಂಟ್ ಆಗಿ ಏನು ಆಗುತ್ತದೆ. ಆ ಡಿಸಿಶನ್ ಆಧಾರದ ಮೇಲೆ ಮಾಡುತ್ತೇವೆ. ಕ್ಲಿಯರ್ ಆದ ತಕ್ಷಣ ಆ ಮೇಲೆ 31ರ ಒಳಗೆ ಕ್ಲಿಯರ್ ಆರ್ಡರ್ ಇಶ್ಯೂ ಮಾಡಲಾಗುವುದು. ಟಿ.ಎ.ಸಿ. ಕ್ಲಿಯರೆನ್ಸ್ ಕಮಿಟ್ ಆದ ತಕ್ಷಣ ಸದರಿ ಕೆಲಸವನ್ನು ತೆಗೆದುಕೊಳ್ಳಲಾಗುವುದು.

ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರ ಪರವಾಗಿ : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.